**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ27/2024 ಪಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **04.07.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ **ಶ್ರೀ. ಎಂ.ಡಿ** ವಕೀಲರಿಂದಃ

ನಾನು ಈ ದಾವೆಯಲ್ಲಿ **ವಾದಿಯಾಗಿದ್ದು**, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ಹಾಜರುಪಡಿಸಿದ ದಾಖಲೆಯನ್ನು ನೋಡಿ ಗುರುತಿಸುತ್ತೇನೆ.

ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟ್ ದಿನಾಂಕ **20.01.2021** ನ್ನು **ನಿಪಿ-1** ಎಂದು ಗುರುತಿಸಲಾಯಿತು. ಪ್ರತಿವಾದಿಯವರು ನನ್ನಿಂದ ಸಾಲ ಪಡೆದ ಹಣಕ್ಕಾಗಿ ಸದರಿಯವರು ಸದರಿ ನಿಪಿ-1 ನ್ನು ಮಾಡಿಕೊಟ್ಟಿದ್ದು ಅದಕ್ಕೆ ಪ್ರತಿವಾದಿಯವರು ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ. ಸಾಕ್ಷಿಯು ಸದರಿ ನಿಪಿ-1 ಪ್ರಾಮಿಸರಿ ನೋಟನಲ್ಲಿರುವ ಪ್ರತಿವಾದಿಯವರ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ನಿಪಿ-1 ರಲ್ಲಿರುವ 2 ನೇ ಪ್ರತಿವಾದಿಯವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1 ಎ** ಎಂದು, ಸದರಿ ನಿಪಿ-1 ಕ್ಕೆ ಬಸವಣ್ಣ ಮತ್ತು ಕೆ.ನಾರಾಯಣರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ **ನಿಪಿ-1 ಬಿ ಮತ್ತು ನಿಪಿ-1 ಸಿ** ಎಂದು ಗುರುತಿಸಲಾಯಿತು. ಸದರಿ ನಿಪಿ-1 ನ್ನು ದಸ್ತಾರು ಮಾಡಿರುವ ಶ್ರೀ ಎಸ್.ಎಲ್ ಚಿಕ್ಕಣ್ಣರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-1 ಡಿ** ಎಂದು ಗುರುತಿಸಲಾಯಿತು.

ಸದರಿ ನಿಪಿ-1 ದಾಖಲೆಯಲ್ಲಿ ಸದರಿ ಪ್ರತಿವಾದಿಯವರು ಹಣಸಂದಾಯ ರಸೀದಿ ಮಾಡಿಕೊಟ್ಟಿದ್ದು ಅದಕ್ಕೆ ಪ್ರತಿವಾದಿಯವರು ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ. ಸಾಕ್ಷಿಯು ಸದರಿ ನಿಪಿ-1 ರ ಹಣ ಸಂಂದಾಯ ರಸೀದಿಯಲ್ಲಿರುವ ಪ್ರತಿವಾದಿಯವರ

ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ನಿಪಿ-1 ಹಣಸಂದಾಯ ರಸೀದಿಯಲ್ಲಿರುವ ರಲ್ಲಿರುವ 2 ನೇ ಪ್ರತಿವಾದಿಯವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1 ಇ** ಎಂದು, ಸದರಿ ನಿಪಿ-1 ಹಣ ಸಂದಾಯ ರಸೀದಿಗೆ ಬಸವಣ್ಣ ಮತ್ತು ಕೆ.ನಾರಾಯಣರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ **ನಿಪಿ-1 ಎಫ್** ಮತ್ತು **ನಿಪಿ-1 ಜಿ** ಎಂದು ಗುರುತಿಸಲಾಯಿತು. ಸದರಿ ನಿಪಿ-1 ಹಣ ಸಂದಾಯ ರಸೀದಿಯನ್ನು ದಸ್ತಾರು ಮಾಡಿರುವ ಶ್ರೀ ಎಸ್.ಎಲ್ ಚಿಕ್ಕಣ್ಣರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-1 ಎಚ್** ಎಂದು ಗುರುತಿಸಲಾಯಿತು. ವಕೀಲರ ನೋಟಿಸ ದಿನಾಂಕ **02.01.2024** ನ್ನು **ನಿಪಿ-2** ಎಂದು, ಮೂರು ಅಂಚೆ ರಸೀದಿಗಳನ್ನು ಕ್ರಮವಾಗಿ **ನಿಪಿ-3 ರಿಂದ ನಿಪಿ-5** ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ **ನಿಪಿ-6 ಮತ್ತು ನಿಪಿ-7** ಎಂದು, ಜಾರಿಯಾಗದ ಅಂಚೆ ಲಕೋಟೆಯನ್ನು **ನಿಪಿ-8** ಎಂದು, ಸದರಿ ಅಂಚೆ ಲಕೋಟೆಯನ್ನು ಒಡೆದು ನೋಡಲಾಗಿ ಅದರಲ್ಲಿರುವ ನೋಟಿಸನ್ನು **ನಿಪಿ-8 ಎ** ಎಂದು, ಪ್ರತಿವಾದಿಯವರು ನೀಡಿರುವ ಪ್ರತ್ಯುತ್ತರ ನೋಟಿಸ ದಿನಾಂಕ **18.01.2024** ನ್ನು **ನಿಪಿ-9** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**

**O.S No. 27/2024**

Counsel for both present.

For plaintiff evidence, plaintiff present and filed examination in chief by way affidavit and examined as PW.1 and got marked Ex.P1 to P9 and for cross of PW.1, counsel for defendant prays time.

For cross of PW.1.

Call on 09.08.2024.

**Civil Judge and JMFC.,**
**T.Narasipura.**